ಶ್ರೀ ಜಿ. ಬಸವಣ್ಣಪ್ಪ (ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ)

ಅಕ್ಕಿ.

೧) ಕುಂದಾಪುರ ಹಾಗೂ ಬೈಂದೂರು ಪುರಸಭಾ ಪ್ರದೇಶಗಳಲ್ಲಿ	೧೦ ಕೆ.ಜಿ. ಪ್ರತಿ ಕಾರ್ಡಿಗೆ
೨) ಗ್ರಾಮಾಂತರ ಪ್ರದೇಶದಲ್ಲಿ.	
ಅ) ಹಸಿರು ಪಡಿತರ ಚೀಟಿ ಹೊಂದಿದವರಿಗೆ	೧೦ ಕೆ.ಜಿ. ಪ್ರತಿ ಕಾರ್ಡಿಗೆ
ಆ) ಇತರರಿಗೆ	೫ ಕೆ.ಜಿ. ಪ್ರತಿ ಕಾರ್ಡಿಗೆ
ಸಕ್ಕರೆ.	ಇಲ್ಲ,

ಮುಸ್ಲಿಂ ಪೋಲೀಸ್ ಪೇದೆಗಳ ಗಡ್ಡದ ಆಯುಷ್ಕಾರ್ಯದ ಬಗ್ಗೆ.

೭೨೬. ಶ್ರೀ ಜಿ. ರಾಜುಗೌಡ (ಹನೂರು).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಸ್ಲಿಂ ಪೇದೆಗಳು ಗಡ್ಡ ಬೋಳಿಸಿಕೊಂಡೇ ವೃತ್ತಿಗೆ ಹಾಜರಾಗಬೇಕೆಂಬ ನಿಯಮವು ರಾಜ್ಯದಲ್ಲಿ ಯಾವಾಗ ಜಾರಿಗೆ ಬಂದಿದೆ?

ಆ) ಹಾಗಿದ್ದಲ್ಲಿ ಕಾನೂನಿಗೆ ವಿರೋಧವಾಗಿ ನಡೆದವರನ್ನು ಸೇವೆಯಿಂದ ಅವಮಾನಕರವಾಗಿ ತೆಗೆದುಹಾಕಲಾಗಿದೆಯೆಂಬುದು ನಿಜವೇ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಆ) ಎಲ್ಲಾ ಪೋಲೀಸ್ ಪೇದೆಗಳು ಸ್ವಚ್ಛತೆಯಿಂದ ಹಾಜರಾಗಬೇಕೆಂಬ ನಿಯಮವು ಮೊದಲಿನಿಂದಲೂ ಇತ್ತು. ಪೋಲೀಸ್ ಅಧಿಕಾರಿಗಳು ಕರ್ತವ್ಯ ನಿರತರಾಗಿರುವಾಗ ಗಡ್ಡ ಬೆಳೆಸುವುದು ಮತ್ತು ಅಥವಾ ಉದ್ದ ಕೂದಲು ಬಿಡುವುದು ಮಾಡಕೂಡದೆಂದು ಪೋಲೀಸ್ ಮ್ಯಾನುಯಲ್‌ನಲ್ಲಿ ತಿದ್ದುಪಡಿ ಮಾಡಿ ದಿನಾಂಕ ೧೦-೯-೮೫ ರಿಂದ ಜಾರಿಗೆ ತರಲಾಯಿತು.

ಆ) ಹೌದು.

ಬೆಂಗಳೂರಿನಲ್ಲಿರುವ ಆಯುರ್ವೇದ, ಯುನಾನಿ ಹೋಮಿಯೋಪತಿ ಆಸ್ಪತ್ರೆಯ ಶಕ್ತಿಯ ಬಗ್ಗೆ.

೭೨೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿರುವ ಆಯುರ್ವೇದ, ಯುನಾನಿ ಹೋಮಿಯೋಪತಿ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು ?

ಆ) ಮೇಲಿನ ಮೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾದ ಹೊರರೋಗಿಗಳ ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು ? (ಕಳೆದ ಮೂರು ವರ್ಷಗಳ ಅವಧಿಯ ಅಂಕಿ ಅಂಶಗಳನ್ನು ನೀಡುವುದು)

ಇ) ಭಾರತೀಯ ವೈದ್ಯಪದ್ಧತಿಯಲ್ಲಿ ಹೆಚ್ಚು ಸರಿ ವಾಸ್ತವ್ಯಕ್ಕಾಗಿ ಕಟ್ಟಡ ನಿರ್ಮಾಣದ ಬಗ್ಗೆ ಪ್ರಸ್ತಾವನೆಯೇನಾದರೂ ಸರ್ಕಾರದ ಮುಂದಿದೆಯೇ ? ಇದ್ದಲ್ಲಿ ಯೋಜನೆಯ ಅಂದಾಜು ವೆಚ್ಚವೆಷ್ಟು ? ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಈ) ಬೆಂಗಳೂರಿನಲ್ಲಿ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಇದೆಯೆ ? ಇಲ್ಲವಾದಲ್ಲಿ ಆ ರೀತಿಯ ಆಸ್ಪತ್ರೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?